ಓ ಎಸ್ ನಂ. 242/2022
ಪಿ ಡಬ್ಲ್ಯು 1
ದಿನಾಂಕ 13-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 7 ಮತ್ತು 8 ನೇ ಪ್ರತಿವಾದಿಗಳ ಪರಃ ಶ್ರೀ ಎಂ ಒ ಜೆ ವಕೀಲರಿಂದಃ</u>

ನನ್ನ ಅಜ್ಜ ಮರುಳಪ್ಪರವರಿಗೆ 4 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ನನ್ನ ತಂದೆ ವೀರಭದ್ರಪ್ಪ ಮತ್ತು 6 ನೇ ಪ್ರತಿವಾದಿಯ ಗಂಡ ಗೋವಿಂದಪ್ಪ ಸಹೋದರರು ಎಂದರೆ ಸರಿ. ಸದರಿ ಗೋವಿಂದಪ್ಪರವರಿಗೆ 6 ಜನ ಮಕ್ಕಳು. ಗೋವಿಂದಪ್ಪರವರ ಮಕ್ಕಳನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಗೋವಿಂದಪ್ಪರವರ ಹೆಂಡತಿಯನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ಮರುಳಮ್ಮ ಲಕ್ಷ್ಮಮ್ಮ ಮತ್ತು ಶಾರದಮ್ಮರವರು ಪೌತಿಯಾಗಿರುತ್ತಾರೆ. ಅವರುಗಳಿಗೆ ಮಕ್ಕಳು ಇದ್ದಾರೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

2. ದಾವಾ ಐಟಂ ನಂ.1 ರ 1 ಎಕರೆ 01 ಗುಂಟೆ ಜಮೀನಿನ ಪೈಕಿ 6 ನೇ ಪ್ರತಿವಾದಿಯ ಗಂಡ ಗೋವಿಂದಪ್ಪ 11 ಗುಂಟೆ ಜಮೀನಿಗೆ ಸಂಬಂದಪಟ್ಟಂತೆ 7 ನೇ ಪ್ರತಿವಾದಿಗೆ ಒಂದು ಕ್ರಯಪತ್ರ ಮಾಡಿಕೊಟಿಟರುತ್ತಾರೆ ಎಂದರೆ ಸರಿ. ಅದೇರೀತಿ ಸದರಿ ಗೋವಿಂದಪ್ಪರವರು ದಾವಾ ಐಟಂ ನಂ.3 ರ 3 ಎಕರೆ 21 ಗುಂಟೆ ಪೈಕಿ 1 ಎಕರೆ 30 ½ ಗುಂಟೆ ಜಮೀನನ್ನು 8 ನೇ ಪ್ರತಿವಾದಿ ಲೋಕೇಶ್ ರವರಿಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಅದರಂತೆ 7 ಮತ್ತು 8 ನೇ ಪ್ರತಿವಾದಿಗಳು ಮೇಲ್ಕಂಡ ಸ್ವತ್ತುಗಳ ಸ್ವಾಧೀನದಲ್ಲಿದ್ದಾರೆ ಎಂದರೆ

ಸರಿ. ಸದರಿ ಗೋವಿಂದಪ್ಪರವರು ಮೇಲ್ಕಂಡ ಕ್ರಯಪತ್ರಗಳಡಿಯಲ್ಲಿ ಅವರ ಭಾಗದ ಆಸ್ತಿಯನ್ನು ಮಾತ್ರ ಮಾರಾಟ ಮಾಡಿದ್ದು ನನ್ನ ತಂದೆಯ ಭಾಗದ ಆಸ್ತಿಯನ್ನು ಹಾಗೆಯೇ ಉಳಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಯಾವುದೇ ವಿಭಾಗ ಆಗಿಲ್ಲ, ನನ್ನ ತಂದೆಯ ಸ್ವಾಧೀನದಲ್ಲಿದ್ದ ಜಮೀನನ್ನು ಹಾಗೆಯೇ ಉಳಿಸಿರುತ್ತಾರೆ, ಗೋವಿಂದಪ್ಪರವರು ಸ್ವಾಧೀನ ಇದ್ದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ, ಯಾವುದೇ ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ. ಓ ಎಸ್ ನಂ.59/2002 ರ ದಾವೆಯಂತೆ ನನ್ನ ತಂದೆ ಸದರಿ ದಾವೆಯನ್ನು ಈ ದಾವೆಯ 6 ನೇ ಪ್ರತಿವಾದಿಯ ಗಂಡ, 7 ನೇ ಪ್ರತಿವಾದಿ ಮತ್ತು ಉಪನೊಂದಣಾಧಿಕಾರಿಯ ವಿರುದ್ಧ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ದಾವಾ ಐಟಂ ನಂ.1 ರ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದು, ಆ ಬಗ್ಗ ಶಾಶ್ವತ ನಿರ್ಬಂದಕಾಜ್ಞೆಗಾಗಿ ಮತ್ತು 7 ನೇ ಪ್ರತಿವಾದಿಗೆ  ಮಾಡಿಕೊಟ್ಟ ಕ್ರಯಪತ್ರ ಸಿಂಧುವಲ್ಲ ಎಂಬುದಾಗಿ ಪ್ರಕರಣ ದಾಖಲಿಸಿದ್ದರು ಎಂದರೆ ಸಾಕ್ಷಿ ಸರಿ ಇರಬಹುದು, ನನಗೆ ಸರಿಯಾಗಿ ಗೊತ್ತಿಲ್ಲ, ಆ ಸಮಯದಲ್ಲಿ ನಾನು ಬೆಂಗಳೂರಿನಲ್ಲಿದ್ದೆ ಎಂದು ನುಡಿದಿರುತ್ತಾರೆ. ಸದರಿ ದಾವೆ ವಿಚಾರಣೆಯಾಗಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಆದೇಶದ ವಿರುದ್ಧ ನನ್ನ ತಂದೆ ಈ ನ್ಯಾಯಾಲಯದಲ್ಲಿ ಆರ್ ಎ ನಂ.26/2008 ರಂತೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ ಸಹ ವಜಾವಾಗಿದೆ ಎಂದರೆ ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಯ ಗಂಡ ಗೋವಿಂದಪ್ಪರವರು 7 ಮತ್ತು 8 ನೇ ಪ್ರತಿವಾದಿಗಳಿಗೆ ಸ್ವತ್ತುಗಳನ್ನು ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿ ಸುಮಾರು 20-25 ವರ್ಷಗಳಾಗಿವೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ 7 ಮತ್ತು 8 ನೇ ಪ್ರತಿವಾದಿಗಳು ಹಣವಿನಿಯೋಗಿಸಿ ಅಭಿವೃದ್ಧಿ ಮಾಡಿರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ನನ್ನ ತಂದೆಯ ಭಾಗದಲ್ಲಿ ಬರಬೇಕಾಗಿದ್ದ ಹಿಸ್ಸೆಗಾಗಿ ನನ್ನ

ಸಹೋದರರ ವಿರುದ್ದ ಹೂಡಿದ್ದು, ಗೋವಿಂದಪ್ಪರವರು 7 ಮತ್ತು 8 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುವ ಸ್ವತ್ತುಗಳ ಮೇಲಾಗಲಿ ಅಥವಾ ಕ್ರಯಪತ್ರಗಳಿಗೆ ನನ್ನ ಅಭ್ಯಂತರ ಇರುವುದಿಲ್ಲ ಎಂದರೆ ಸರಿ. ನನ್ನ ತಂದೆಯ ಭಾಗದ ಆಸ್ತಿಗಳಿಗೆ ಮಾತ್ರ ನಾನು ದಾವೆ ಹೂಡಿದ್ದೇನೆ ಎಂದರೆ ಸರಿ. 7 ನೇ ಪ್ರತಿವಾದಿಗೆ ದಿನಾಂಕ 26/09/1997 ಮತ್ತು 8 ನೇ ಪ್ರತಿವಾದಿಗೆ ದಿನಾಂಕ 19/10/2001 ರ ಕ್ರಯಪತ್ರಗಳಾದ 20 ವರ್ಷಗಳ ನಂತರ ಅವರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ. ಸದರಿ ಕ್ರಯಪತ್ರಗಳಾದ 3 ವರ್ಷದ ಅವಧಿಯೊಳಗೆ ಅವುಗಳನ್ನು ನಾನು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ನಾನು ಊರಿನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.